**OS 87/22**

ಪಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ದಿಃ 11-03-2025**

<u>ಮುಂದುವರಿದ ಪಾಟೀ ಸವಾಲು</u> : ಪ್ರತಿವಾದಿ ಪರಃ ಶ್ರೀ ಎಸ್ ಎಸ್ ಎ ವಕೀಲರಿಂದಃ

ನಾನು ವರಂಗದಲ್ಲಿ ಸನ್ನಿಧಿ ಬ್ಯಾಟಿಪಾರ್ಲರ್ ನಡೆಸುತ್ತಿದ್ದೇನೆ ಎಂದರೆ ಸರಿ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ನನ್ನ ಬ್ಯೂಟಿ ಪಾರ್ಲರ್ ಗೆ ಸಂಬಂಧಿಸಿದ ಆಹ್ವಾನ ಪತ್ರಿಕೆ ಹಾಗೂ ಸಂಪರ್ಕ ದಾಖಲೆ ಎಂದು ಒಪ್ಪಿಕೊಂಡಿದ್ದು ಅದನ್ನು ಒಪ್ಪಿಗೆಯ ಮೇರೆಗೆ ನಿಡಿ-1 ಎಂದು ಗುರುತಿಸಲಾಯಿತು. ಸದರಿ ಬ್ಯೂಟಿ ಪಾರ್ಲರ್ ಶಾಪ್ ನಲ್ಲಿ ಟೈಲರಿಂಗ್ ಕೂಡ ಮಾಡುತ್ತೇನೆ. ಈಗಲೂ ಕೂಡ ನಡೆಸುತ್ತಿದ್ದೇನೆ. ಅದರಲ್ಲಿ ತಿಂಗಳಿಗೆ 40,000/- ವರಮಾನ ಇದೆ ಎಂದರೆ ಸರಿಯಲ್ಲ. ಮುಂದುವರಿದು 10,000/- ಇದೆ. ಈಗ ನನಗೆ ತೋರಿಸಿದ ಭಾವಚಿತ್ರಗಳು ಬ್ಯೂಟಿ ಪಾರ್ಲರ್ ಪ್ರಾರಂಭಿಸುವ ಮುನ್ನ ನಿರೀಕ್ಷಾ ಶೆಟ್ಟಿ ಯವರೊಂದಿಗೆ ತರಭೇತಿ ಪಡೆದ ಸಮಯದಲ್ಲಿ ತೆಗೆಸಿಕೊಂಡಿದ್ದ 14 ಭಾವಚಿತ್ರಗಳು ಆಗಿದ್ದು. ಅದನ್ನು ಸಾಕ್ಷಿ ಒಪ್ಪಿದ ಮೇರೆಗೆ ಒಟ್ಟಾಗಿ ನಿಡಿ-2 ಎಂದು ಗುರುತಿಸಲಾಯಿತು.

ನನ್ನ ಬಳಿ ದ್ವಿಚಕ್ರ ವಾಹನ ಇದೆ. ಅದನ್ನು ಒಂದೂವರೆ ವರ್ಷದ ಹಿಂದೆ ಖರೀದಿಸಿರುತ್ತೇನೆ. ಈಗ ನನಗೆ ತೋರಿಸಿದ ದಾಖಲೆ ಸದರಿ ದ್ವಿಚಕ್ರ ವಾಹನಕ್ಕೆ ಸಂಬಂಧಿಸಿದ ಆರ್ ಸಿ ಡಿಟೇಲ್ಸ ಆಗಿದ್ದು ಅದನ್ನು ಸಾಕ್ಷಿ ಒಪ್ಪಿದ ಮೇರೆಗೆ ನಿಡಿ-3 ಎಂದು ಗುರುತಿಸಲಾಯಿತು. ಸದರಿ ವಾಹನವನ್ನು ಜೋಡುರಸ್ತೆಯ ಬಂಟ್ಸ ಸೊಸೈಟಿಯಲ್ಲಿ ಲೋನ್ ಮಾಡಿ ಖರೀದಿಸಿರುತ್ತೇನೆ. ಆ ಬಗ್ಗೆ ದಾಖಲೆ ಇದೆ.

ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನಾನು ಲೋನ್ ಪಡೆದುಕೊಂಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-24, ರಿಂದ 26 ರಲ್ಲಿ ಬಿಲ್ಲು ಹಣವನ್ನು ನಾನೇ ಪಾವತಿ ಮಾಡಿದ್ದೇನೆ ಎಂದು ಕಂಡು ಬರುವುದಿಲ್ಲ ಎಂದರೆ ಸರಿ. ಪ್ರವೀಣ್ ಹೆಗ್ಡೆ ಮುಂಬೈನಲ್ಲಿ ಇರುವಾಗ ಅವರ ಎಟಿಎಮ್ ಕಾರ್ಡ್ ಅನ್ನು ನನಗೆ ಕೊಟ್ಟಿದ್ದು ನಾನು ಸಾಕಷ್ಟು ಹಣವನ್ನು ಡ್ರಾ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-19 ಮತ್ತು 20 ರಂತೆ ಹೆಬ್ರಿ ಪೋಲಿಸ್ ಠಾಣೆಗೆ ನೀಡಿದ ಪಿರ್ಯಾದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಹಾಜರುಪಡಿಸಿರುತ್ತೇನೆ. ಸದರಿ ಪಿರ್ಯಾದಿಯನ್ನು ಪ್ರತಿವಾದಿ ರಾತ್ರಿ ಮನೆಗೆ ಬಂದು ಗಲಾಟೆ ಮಾಡಿದ ವಿಚಾರಕ್ಕೆ ನೀಡಿರುತ್ತೇನೆ. ಅದರ ಬಗ್ಗೆ ಕ್ರಿಮಿನಲ್ ಕೇಸ್ ಆಗಿರುತ್ತದೆಯಾ ಎಂದರೆ ಇಲ್ಲ. ನನ್ನ ಮೊಬೈಲ್ ಗೆ ಇತರ ವ್ಯಕ್ತಿಗಳ ಕರೆ ಹಾಗೂ ವ್ಯಾಟ್ಸಪ್ ಗೆ ಮೇಸೆಜ್ ಬರುತ್ತಿದ್ದುದ್ದನ್ನು ಪ್ರಶ್ನೆ ಮಾಡಿದಕ್ಕೆ ಮೇಲೆ ಹೇಳಿದ ಪಿರ್ಯಾದಿಗಳನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಮಹಿಳಾ ಸಾಂತ್ವಾನ ಕೇಂದ್ರಕ್ಕೆ ದೂರು ನೀಡಿರುತ್ತೇನೆ. ಅಲ್ಲಿ ಪ್ರತಿವಾದಿ ಹಾಜರಾಗಿರುತ್ತಾರೆ. ಅಲ್ಲಿ ನಿಪಿ-23 ರ ಪ್ರಕಾರ ನನ್ನನ್ನು ಮತ್ತು ಪ್ರತಿವಾದಿಯವರ ನಡುವೆ ಸಮಾಲೋಚನೆ ನಡೆಸಿ ಸಾಂತ್ವಾನ ಕೇಂದ್ರದವರು ಅಂತಿಮ ವರದಿ ನೀಡಿರುತ್ತಾರೆ. ಪ್ರತಿವಾದಿಯವರು ಸಾಂತ್ವಾನ ಕೇಂದ್ರದಲ್ಲಿ ನನ್ನ ತಾಯಿಯ ಜಾಗದಲ್ಲಿ ಮನೆ ಕಟ್ಟಲು ಹಣ ನೀಡಿರುವ ಕುರಿತು ಹೇಳಿರುತ್ತಾರೆ ಎಂದರೆ ಸರಿ. ಪ್ರತಿವಾದಿಯ ಸಂಬಳ ಕುರಿತಂತೆ ನಿಪಿ-10 ದಾಖಲೆ ನೀಡಿದ್ದು ಅದು ಹೇಗೆ ಸಿಕ್ಕಿತ್ತು ಎಂದರೆ ನಿಪಿ-10 ನನ್ನ ಮನೆಯಲ್ಲಿ ಇತ್ತು. ಗೋಲ್ಡನ್ ಗೇಟ್ ಬಾರ್ ಆ್ಯಂಡ್ ರೆಸ್ಟೋರೆಂಟ್ ಮಂಗಳೂರಿನಲ್ಲಿ ಇದೆಯಾ ಎಂದರೆ ಮೊದಲು ಇತ್ತು ಈಗ ಇರುವ ಬಗ್ಗೆ ಗೊತ್ತಿಲ್ಲ. ನಿಪಿ-10 ದಾಖಲೆ ನೀಡಿದ ದಿಃ 01-01-2020 ರಲ್ಲಿ ಕೂಡ ಮೇಲೆ ಹೇಳಿದ ರೆಸ್ಟೋರೆಂಟ್ ಇರಲಿಲ್ಲ ಹಾಗೂ ನನ್ನ ಅನುಕೂಲಕ್ಕಾಗಿ ನಿಪಿ-10 ದಾಖಲೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-10 ಕ್ಕೂ ಪ್ರತಿವಾದಿಗೂ ಯಾವುದೇ

ಸಂಬಂಧವಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು 2019 ರಿಂದ ಇಲ್ಲಿಯವರೆಗೂ ಮಂಗಳೂರಿನ ಜೀತ್ ಅವೆನ್ಯೂ ಫ್ಯಾಮಿಲಿ ರೆಸ್ಟೋರೆಂಟ್ ನಲ್ಲಿ ಕ್ಯಾಶಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅದರಲ್ಲಿ ಪ್ರತಿವಾದಿಗೆ ಕೇವಲ 13,000/- ಮಾಸಿಕ ಸಂಬಳ ಬರುತ್ತಿತ್ತು ಎಂದರೆ ಸರಿಯಲ್ಲ.

ದಾವಾ ಬಿ ಅನುಸೂಚಿ ಆಸ್ತಿಯ ಪಹಣಿ ಪತ್ರಿಕೆ ಪ್ರದೀಪ್ ಹೆಗ್ಡೆ ಹಾಗೂ ಪ್ರವೀಣ್ ಹೆಗ್ಡೆಯವರ ಹೆಸರಿನಲ್ಲಿ ಇರುತ್ತಾರೆ. ಪ್ರದೀಪ್ ಹೆಗ್ಡೆ ಪ್ರತಿವಾದಿಯ ಅಣ್ಣ. ಸದರಿಯವರು ಈ ದಾವೆಯ ಪಕ್ಷಗಾರರಲ್ಲ ಎಂದರೆ ಸರಿ. ಎರಡು ಆಸ್ತಿಗಳನ್ನು ಕುರಿತಂತೆ ನನ್ನ ಜೀವಾನಂಶದ ಬಾಬ್ತು ಪಡೆಯುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ನಾನು ಮಾಸಿಕ 30,000/- ಜೀವಾನಂಶ ಕೇಳಿರುತ್ತೇನೆ. ಪ್ರತಿವಾದಿಗೆ ಮಾಸಿಕ 30 ರಿಂದ 35 ಸಾವಿರ ಸಂಬಳ ಇದೆ. ಆ ಬಗ್ಗೆ ಏನೂ ದಾಖಲೆ ಇದೆ ಎಂದರೆ ಏನೂ ಇಲ್ಲ. ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸದೇ ಯಾವುದೇ ಆಧಾಯ ಇಲ್ಲದ ಪ್ರತಿವಾದಿಯನ್ನು ಸಂಕಷ್ಟದಲ್ಲಿ ಸಿಲಿಕಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-7 ರಿಂದ 9 ನೀಡಿದಂತಹ ವ್ಯಕ್ತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿ ಅವರನ್ನು ವಿಚಾರಣೆಗೆ ಒಳಪಡಿಸಬಹುದು ಎಂದರೆ ಅವರ ಪರಿಚಯ ಇರುವುದಿಲ್ಲ. ನಿಪಿ-31 ರಲ್ಲಿ ಕಂಡು ಬರುವ ಸಾಲ ಪ್ರತಿವಾದಿ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಯ ಜಾಗದಲ್ಲಿ ಮನೆಯನ್ನು 2018 ರಲ್ಲಿ ಕಟ್ಟಿ ಪೂರ್ಣಗೊಳಿಸಿರುತ್ತೇನೆ. ನಿಪಿ-5 ಸಾಲವನ್ನು ಮನೆ ಕಟ್ಟಲು ಪಡೆದಿರುತ್ತೇನೆ. ನಿಪಿ-5 ರ ಸಾಲವನ್ನು ನನ್ನ ವೈಯಕ್ತಿಕ ಉದ್ದೇಶಕ್ಕೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ದಾಖಲೆ ನನ್ನ ತಾಯಿಯ ಜಾಗದಲ್ಲಿ ಕಟ್ಟಿಸಿದ ಮನೆಯ ಗೃಹಪ್ರವೇಶದ ಆಹ್ವಾನ ಪ್ರತಿಕೆಯಾಗಿದ್ದು ಅದನ್ನು ಸಾಕ್ಷಿ ಒಪ್ಪಿದ ಮೇರೆಗೆ ನಿಡಿ-4 ಎಂದು ಗುರುತಿಸಲಾಯಿತು. ನಾನು ಬಡಕುಟುಂಬದಿಂದ ಬಂದ ಹುಡುಗಿ ಎಂದು ನನ್ನನ್ನು ಪ್ರತಿವಾದಿ ಮದುವೆಯಾಗಿ ನನ್ನ ತಾಯಿಯ ಜಾಗದಲ್ಲಿ ಮನೆಯನ್ನು ಕಟ್ಟಿಸಿಕೊಟ್ಟು ಕೃಷಿ ಮಾಡಿ ಕೃಷಿ ಫಲ

ಬರುವ ಹೊತ್ತಿಗೆ, ನನ್ನ ಬ್ಯೂಟಿ ಪ್ಯಾಲರ್, ಟೈಲರ್ ಅಂಗಡಿಗೂ ಹಣ ಸಹಾಯ ಮಾಡಿ ಎಲ್ಲಾ ವ್ಯವಸ್ಥೆ ಆದ ನಂತರ ಪ್ರತಿವಾದಿಯ ವಿರುದ್ಧ ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಎಲ್ಲದಕ್ಕೂ ಪ್ರತಿವಾದಿ 20 ಲಕ್ಷ ಹಣವನ್ನು ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಅವರ ಮಗ ಎರಡನೇ ವಾದಿಯ ಬ್ಯಾಂಕ್ ಖಾತೆಗೆ ಹಣ ಹಾಕುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿಯ ಉದ್ಯೋಗದ ಹೆಚ್ಚಿನ ಹಣವನ್ನು ನನ್ನ ಜೀವನಕ್ಕಾಗಿ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಸಣ್ಣ ಆಧಾಯವನ್ನು ನನಗೆ ಖರ್ಚು ಮಾಡಿದ್ದರೂ ಸಹ ಅವರಿಗೆ ತೊಂದರೆ ಆಗಲಿ ಉದ್ದೇಶದಿಂದ ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮಂಗಳೂರಿನ ನಿರೀಕ್ಷ ಶೆಟ್ಟಿ ಯವರ ಬಳಿ ಬ್ಯೂಟಿ ಪಾರ್ಲರ್ ತರಭೇತಿಗೆ 65,000/- ಖರ್ಚು ಆಗಿರುತ್ತದೆ. ನಿಡಿ-1 ರಲ್ಲಿ ಕಾಣಿಸುವ ವರಂಗದ ಸನ್ನಿದಿ ಟೈಲರಿಂಗ್ ಶಾಪ್ ಮೊದಲಿನಿಂದಲೂ ಇತ್ತು. ವಿವಾಹವಾದ ಸಮಯದಿಂದಲೂ ಆ ಟೈಲರಿಂಗ್ ಹಾಗೂ ಬ್ಯೂಟಿ ಪಾರ್ಲರ್ ನಿಂದ ಮಾಸಿಕ 40,000/- ಆಧಾಯ ಗಳಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಆಧಾಯಕ್ಕಿಂತಲೂ ನನ್ನ ಆಧಾಯ ಹೆಚ್ಚು ಇದೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿದ ರೀತಿ ಯಾವುದೇ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ